# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. / ಎಸ್ ಟಿ ನಂ. 23/2024

ಪ್ರ.ವ.ಬೋ. ದಿನಾಂಕ - 02.04.2026

| | | | |
|---|---|---|---|
| ಸಾಕ್ಷಿದಾರರ ಹೆಸರು | - ಶಾರದಮ್ಮ | ಫ್ರಾ.ಸಾ. | - 01 |
| ಗಂಡನ ಹೆಸರು | - ತಿಪ್ಪೇಸ್ವಾಮಿ | ಚಾ.ಸಾ. | - 01 |
| ವಯಸ್ಸು | - 60 ವರ್ಷ | | |
| ಉದ್ಯೋಗ | - ಕೂಲಿ ಕೆಲಸ | | |
| ವಾಸ ಸ್ಥಳ | - ಶಿವಪುರ, ಹೊಳಲ್ಕೆರೆ ತಾಲ್ಲೂಕು | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳು ನನಗೆ ಗೊತ್ತು. ಮೃತ ವೆಂಕಟೇಶ್ ನನ್ನ ತಮ್ಮ. ಆರೋಪಿಗಳು ಕುರುಬ ಜನಾಂಗದವರು. ನಾವು ನಾಯಕ ಜನಾಂಗದವರು. ನನಗೆ 3 ಜನ ಮಕ್ಕಳು. ನಾನು ಶಿವಪುರದಲ್ಲಿ ವಾಸವಿರುತ್ತೇನೆ. ಮೃತ ವೆಂಕಟೇಶ್ ಶಿವಪುರದಲ್ಲಿ ವಾಸ ಮಾಡುತ್ತಿದ್ದನು. ವೆಂಕಟೇಶನ ಮದುವೆ ಚಾಸಾ-22 ಕಮಲಮ್ಮ ಇವರ ಜೊತೆ ಆಗಿತ್ತು. ಅವರಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಗು ಇರುತ್ತದೆ. ಆರೋಪಿಗಳು ಚಾಸಾ-13 ಚಂದ್ರಮ್ಮ ಇವರ ಮನೆಯ ಪಕ್ಕ ವಾಸವಿರುತ್ತಾರೆ. ಮೃತ ವೆಂಕಟೇಶ್ ಇವರ ಜೊತೆ ಅವನ ಹೆಂಡತಿ ಚಾಸಾ-22 ಮತ್ತು ಅವನ ಮಗ ವಾಸ ಮಾಡುತ್ತಿದ್ದರು. ಮೃತ ವೆಂಕಟೇಶ ಮತ್ತು ಅವನ ಹೆಂಡತಿ ಯಾವಗಲೂ ಜಗಳ ಮಾಡುತ್ತಿದ್ದರು. ವೆಂಕಟೇಶನ ಹೆಂಡತಿ ಕಮಲಮ್ಮ 1 ನೇ ಆರೋಪಿ ಜೊತೆಗೆ ಕಳ್ಳ ಸಂಬಂಧ ಇಟ್ಟುಕೊಂಡಿದ್ದಳು. ಈ ವಿಚಾರವಾಗಿ ಅವರು ಜಗಳ ಮಾಡುತ್ತಿದ್ದರು. ವೆಂಕಟೇಶ ತೀರಿಕೊಳ್ಳುವ ಒಂದು ವರ್ಷ ಮೊದಲು ಚಾಸಾ-22 ಚಿತ್ರದುರ್ಗದಲ್ಲಿ ಮಗನ ಜೊತೆ ವಾಸ ಮಾಡುತ್ತಿದ್ದಳು. ಚಾಸಾ-22 ಮತ್ತು ವೆಂಕಟೇಶ ಜಗಳವಾಡುತ್ತಿದ್ದರಿಂದ ಚಾಸಾ-22 ಚಿತ್ರದುರ್ಗಕ್ಕೆ ಬಂದು ವಾಸ ಮಾಡುತ್ತಿದ್ದಳು. ನಮ್ಮ ಊರಲ್ಲಿ ಹನುಮಂತ ದೇವರ ತೇರು ಇತ್ತು . ಸದರಿ ದಿನದಂದು ಸಂಜೆ 6.00 ಗಂಟೆ ಸಮಯದಲ್ಲಿ ನನ್ನ ತಮ್ಮ ವೆಂಕಟೇಶ ಅವನ ಮನೆಯ ಹತ್ತಿರ ಕುಳಿತು ಆರೋಪಿತರಿಗೆ ನಮ್ಮ ಮನೆಯಲ್ಲಿ ಹೆಂಡತಿ, ಮಕ್ಕಳು ಇರದೇ ಹಾಗೆ ಮಾಡಿದ್ದೀರಾ ಎಂದು ಬೈಯುತ್ತಿದ್ದನು. ಆಗ ಆರೋಪಿತರು ಅಲ್ಲಿಗೆ ಬಂದು ವೆಂಕಟೇಶನಿಗೆ ಕೋಲಿನಿಂದ ಹೊಡೆದು, ದೂಕಿರುತ್ತಾರೆ. ಆರೋಪಿತರು ವೆಂಕಟೇಶನಿಗೆ ಅವಾಚ್ಯ ಶಬ್ದಗಳಿಂದ ಬೈದರು. ಆಗ ನಾನು ಅಲ್ಲಿಗೆ

ಬಂದು ಜಗಳ ಬಿಡಿಸಿರುತ್ತೇನೆ. ಆಗ ಅಲ್ಲಿಗೆ ಮಣಿಕಂಠ, ಶರಣಪ್ಪ ಬಂದು ಜಗಳ ಬಿಡಿಸಿರುತ್ತಾರೆ. ನಂತರ ವೆಂಕಟೇಶ ಅವನ ಮನೆಗೆ ಹೋಗಿರುತ್ತಾನೆ.

ಮಾರನೇ ದಿನ ಬೆಳಗ್ಗೆ 8.00 ಗಂಟೆಗೆ ಆರೋಪಿತರು ವೆಂಕಟೇಶನ ಮನೆಯ ಹತ್ತಿರ ಬಂದು ವೆಂಕಟೇಶನಿಗೆ ಕೋಲಿನಿಂದ, ಕೈಯಿಂದ ಹೊಡೆಯುತ್ತಿದ್ದರು. ಆಗ ನಾನು ಬಂದು ಜಗಳ ಬಿಡಿಸಿರುತ್ತೇನೆ. ನಂತರ ವೆಂಕಟೇಶನಿಗೆ ಹುಷಾರ್ ಇಲ್ಲದಂತೆ ಆಗಿದ್ದು, ಅವನನ್ನು ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿಗಳು ಹೊಡೆದಿದ್ದರಿಂದ ವೆಂಕಟೇಶ ಮೃತ ಪಟ್ಟಿರುತ್ತಾನೆ. ಆಸ್ಪತ್ರೆಯಲ್ಲಿ ವೈದ್ಯರು ವೆಂಕಟೇಶ ಮೃತ ಪಟ್ಟಿರುತ್ತಾನೆ ಎಂದು ತಿಳಿರುತ್ತಾನೆ. 1 ನೇ ಆರೋಪಿ ಚಾಸಾ–22 ಇವರ ಜೊತೆ ಅಕ್ರಮ ಸಂಬಂಧ ಹೊಂದಿದ್ದರಿಂದ ವೆಂಕಟೇಶನನ್ನು ಕೊಲೆ ಮಾಡಿರುತ್ತಾರೆ. ಆರೋಪಿಗಳು ವೆಂಕಟೇಶನಿಗೆ ಕೋಲಿನಿಂದ ಹೊಡೆದಿದ್ದು, ಸದರಿ ಕೋಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕೋಲನ್ನು ನೋಡಿ ಗುರುತಿಸುತ್ತಾರೆ. ಅದನ್ನು ಮು.ಮಾ–1 ಎಂದು ಗುರುತಿಸಲಾಯಿತು. ಮು.ಮಾ–1 ರಿಂದ 1 ನೇ ಆರೋಪಿ ವೆಂಕಟೇಶನಿಗೆ ಹೊಡೆದಿರುತ್ತಾನೆ. 2 ಮತ್ತು 3 ನೇ ಆರೋಪಿತರು ಕೈ ಕಾಲಿನಿಂದ ಮೃತ ವೆಂಕಟೇಶನಿಗೆ ಹೊಡೆದಿರುತ್ತಾರೆ.

ಈ ಬಗ್ಗೆ ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–1 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ದೂರನ್ನು ಚಂದ್ರಮ್ಮ ಬರೆದಿರುತ್ತಾರೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಮಾರನೇ ದಿನ ಬೆಳಗ್ಗೆ ಆರೋಪಿತರು ವೆಂಕಟೇಶನಿಗೆ ಹೊಡೆದಾಗ ಅಕ್ಕಪಕ್ಕದ ಮನೆಯವರಾದ ಜಯಮ್ಮ, ಮಂಜಮ್ಮ, ರಂಗಸ್ವಾಮಿ, ಸುಜಾತ ಮತ್ತು ಇತರರು ಇದ್ದರು. ಈ ಬಗಗೆ ಪೋಲಿಸರಿಗೆ ಮರು ಹೇಳಿಕೆ ನೀಡಿರುತ್ತೇನೆ.

**– ಪಾಟೀ ಸವಾಲು – ಆರೋಪತರ ಪರವಾಗಿ ಶ್ರೀ.ಎಂ ಸಿ ಟಿ ವಕೀಲರಿಂದ –**

ಚಾಸಾ–12 ಮಣಿಕಂಠ ಮೃತ ವೆಂಕಟೇಶನ ತಂಗಿಯ ಮಗಳ ಗಂಡ ಎಂದರೆ ಸರಿ. ಚಾಸಾ–13 ಚಂದ್ರಮ್ಮ ಮೃತ ವೆಂಕಟೇಶನ ತಂಗಿಯ ಮಗಳು ಎಂದರೆ ಸರಿ. ಚಾಸಾ–11 ನನ್ನ ಮಗಳ ಗಂಡ ಎಂದರೆ ಸರಿ. ಚಾಸಾ–10 ಕುಮಾರಪ್ಪ ಮೃತ ವೆಂಕಟೇಶನ ಅಕ್ಕನ ಮಗ ಎಂದರೆ ಸರಿ. ಚಾಸಾ– 5, 6, 9, 14, 17, 20 ನಮ್ಮ ಕುಲಸ್ಥರು ಎಂದರೆ ಸರಿ. ಶಿವಪುರ ಹೊಳಲ್ಕೆರೆಯಿಂದ ಮತ್ತು ಚಿಕ್ಕಜಾಜೂರಿನಿಂದ 10 ಕಿ ಮೀ ದೂರ ಇರುತ್ತದೆ ಎಂದರೆ ಸರಿ. ನಮ್ಮ ಊರಿನಿಂದ ಹೊಳಲ್ಕೆರೆ ಹೋಗಿ ಬರಲು ಆಟೋ, ಬಸ್ ವ್ಯವಸ್ಥೆ ಇರುತ್ತದೆ

ಎಂದರೆ ಸರಿ. ಶಿವಪುರದಲ್ಲಿ ಒಂದು ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಶಿವಪುರದಲ್ಲಿ 1500 ಮನೆಗಳು ಇರುತ್ತವೆ ಎಂದರೆ ಸರಿ. ಕುರುಬರು ಜನಾಂಗದವರ 4-5 ಮನೆಗಳು ಇರುತ್ತವೆ ಎಂದರೆ ಸರಿ. ನಾಯಕ ಜನಾಂಗಕ್ಕೆ ಸೇರಿದವರ 40-50 ಮನೆಗಳು ಇರುತ್ತವೆ ಎಂದರೆ ಸರಿ. ಲಿಂಗಾಯಿತರ ಮನೆಗಳು ಸುಮಾರು 1,000 ಇರುತ್ತವೆ ಎಂದರೆ ಸರಿ. ಶಿವಪುರಕ್ಕೆ ಹೊಳಲ್ಕೆರೆಯಿಂದ ಮಲ್ಲಾಡಿಹಳ್ಳಿ ಮತ್ತು ಕುಣಗಲಿ ಮೂಲಕ ಹೋಗಬಹುದು ಎಂದರೆ ಸರಿ. ಮಲ್ಲಾಡಿಹಳ್ಳಿಯಿಂದ ಹೋದರೆ ಎಸ್ ಸಿ ಕಾಲೋನಿ ಮತ್ತು ನಮ್ಮ ಕಾಲೋನಿ ಬರುತ್ತದೆ ಎಂದರೆ ಸರಿ. ನಮ್ಮ ಮನೆಯಿಂದ ಆರೋಪಿತರ ಮನೆ ಒಂದು ಫರ್ಲಾಂಗ್ ದೂರು ಇರುತ್ತದೆ ಎಂದರೆ ಸರಿ. ವೆಂಕಟೇಶನ ಮನೆಯ ಸುತ್ತಮುತ್ತ ಬೇರೆ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ನನ್ನನ್ನು ಶಿವಪುರದಿಂದ ಮಾಯಕೊಂಡ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ನಾನು ಗಂಡನ ಮನೆಗೆ ಹೋಗಿರುವುದಿಲ್ಲ. ಗಂಡನ ಮನೆಗೆ ಹೋಗಿ ಬರುವ ಅಭ್ಯಾಸ ಇತ್ತು ಎಂದರೆ ಸರಿ. ನಮ್ಮ ತಂದೆಗೆ ನಾವು 7 ಜನ ಮಕ್ಕಳು. ವೆಂಕಟೇಶನ ಮಗಳು ನಾಗವೇಣಿಗೆ ಸುಮಾರು 20 ವರ್ಷಗಳ ಹಿಂದೆ ಮದುವೆ ಮಾಡಿ ಕೊಟ್ಟಿತ್ತು ಎಂದರೆ ಸರಿ. ವೆಂಕಟೇಶನ ಮಗಳ ಹೆಸರು ಪರಶುರಾಮ ಎಂದರೆ ಸರಿ. ಅವನಿಗೆ 15 ವರ್ಷ ಇರುತ್ತದೆ ಎಂದರೆ ಸರಿ. ಚಾಸಾ-22 ಇವರಿಗೆ ಕಳ್ಳ ಸಂಬಂಧ ಇದ್ದು ಅವಳಿಗೆ ನಾನು ಬುದ್ದಿವಾದ ಹೇಳಿದ್ದೆನು. ಈ ಬಗ್ಗೆ ಆರೋಪಿತರ ಮನೆಯವರನ್ನು ಮತ್ತು ವೆಂಕಟೇಶ ಇವರ ಮನೆಯವರನ್ನು ಕೂಡಿಸಿ ಊರಿನಲ್ಲಿ ಪಂಚಾಯಿತಿ ಮಾಡಿಸಿಲ್ಲ. ಚಾಸಾ-22, 1 ನೇ ಆರೋಪಿ ಜೊತೆಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಬಗ್ಗೆ ಪೋಲಿಸರಿಗೆ ದೂರನ್ನು ನೀಡಿಲ್ಲ. ಚಾಸಾ-22, 1 ನೇ ಆರೋಪಿಯ ಜೊತೆ ಅಕ್ರಮ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ.

ನಮ್ಮ ಊರಿನಲ್ಲಿ ಜಾತ್ರೆ ಇದ್ದಾಗ ಪೋಲಿಸರು ಬಂದಿದ್ದರು. ವೆಂಕಟೇಶನ ಮನೆಯ ಎದುರುಗಡೆ ಮಡಿವಾಳರ ಗೌರಮ್ಮ ಇವರ ಮನೆ ಇರುತ್ತದೆ ಎಂದರೆ ಸರಿ. ವೆಂಕಟೇಶನ ಮನೆಯಿಂದ ಶರಣಪ್ಪ ಅವರ ಮನೆ ಅರ್ಧ ಫರ್ಲಾಂಗ್ ದೂರ ಇದೆ ಎಂದರೆ ಸರಿಯಲ್ಲ. ದಿಃ 18.04.2024 ರಂದು ಆರೋಪಿತರು ವೆಂಕಟೇಶನ ಜೊತೆಗೆ ಸುಮಾರು ಅರ್ಧ ಗಂಟೆ ಜಗಳ ಮಾಡಿರುತ್ತಾರೆ. ಆ ಸಮಯದಲ್ಲಿ ಊರಿನವರು ಬಹಳ ಜನ ಇದ್ದರು. ನಾನು ಈ ಬಗ್ಗೆ ಊರಿನಲ್ಲಿ ಇದ್ದ ಪೋಲಿಸರಿಗೆ ಮಾಹಿತಿ ನೀಡಿಲ್ಲ. ದಿಃ 18.04.2024 ರಂದು ಆರೋಪಿತರು ವೆಂಕಟೇಶನಿಗೆ ದೊಣ್ಣೆಯಿಂದ ಹೊಡೆದಿಲ್ಲ ಮತ್ತು ಕೈ ಕಾಲುಗಳಿಂದ ಹೊಡೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ

ಮತ್ತು ನಾನು ಜಗಳವನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಣಿಕಂಠ, ಶರಣಪ್ಪ ಗಲಾಟೆ ಬಿಡಿಸಿಲ್ಲ ಎಂದರೆ ಸರಿಯಲ್ಲ. ದಿಃ 18.04.2024 ರಂದು ವೆಂಕಟೇಶನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಪ್ರಯತ್ನ ಮಾಡಿಲ್ಲ. ಆರೋಪಿಗಳು ಕೋಲಿನಿಂದ ಹೊಡೆದಿದ್ದರಿಂದ ವೆಂಕಟೇಶನ ಮೈ ಮೇಲೆ ಗಾಯಗಳು ಆಗಿರುತ್ತವೆ. ರಕ್ತ ಬಂದಿರಲಿಲ್ಲ, ಆದರೆ ರಕ್ತ ಹೆಪ್ಪುಗಟ್ಟಿತ್ತು. ಮಾರನೇ ದಿನ ಬೆಳಗ್ಗೆ 8.00 ಗಂಟೆಗೆ ಆರೋಪಿತರು ವೆಂಕಟೇಶನ ಮನೆಯ ಹತ್ತಿರ ಬಂದು ಕೋಲಿನಿಂದ, ಕೈ ಕಾಲುಗಳಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.1 ನೇ ಆರೋಪಿ ಮು.ಮಾ-1 ರಿಂದ ವೆಂಕಟೇಶನಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಹೊಳಲ್ಕೆರೆ ಆಸ್ಪತ್ರೆಗೆ ನಾನು ಮತ್ತು ಚಂದ್ರಮ್ಮ ಹೋಗಿದ್ದೆವು. ಆಸ್ಪತ್ರೆಯಲ್ಲಿ ವೈದ್ಯರಿಗೆ ಗಲಾಟೆಯ ಬಗ್ಗೆ ಹೇಳಿರುವುದಿಲ್ಲ. ಪೋಲಿಸರಿಗೆ ಮುಂದುವರೆದ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮ ವೆಂಕಟೇಶ ಅಡಿಕೆ ತೋಟದ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಸರಿ. ಸುಮಾರು 25-30 ವರ್ಷಗಳಿಂದ ವೆಂಕಟೇಶನಿಗೆ ಕುಡಿಯುವ ಚಟ ಇತ್ತು ಎಂದರೆ ಸರಿ. ವೆಂಕಟೇಶ ಕುಡಿಯುತ್ತಿದ್ದರಿಂದ ಅವನ ಆರೋಗ್ಯ ಹಾಳಾಗಿತ್ತು ಎಂದರೆ ಸರಿಯಲ್ಲ. ವೆಂಕಟೇಶ ಹೆಂಡತಿ, ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೇ ಇದುದರಿಂದ ಅವನ ಹೆಂಡತಿ 5-6 ವರ್ಷಗಳಿಂದ ತವರು ಮನೆಗೆ ಹೋಗಿದ್ದಳು ಎಂದರೆ ಸರಿಯಲ್ಲ. ಚಾಸಾ-22 ಚಿತ್ರದುರ್ಗದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವೆಂಕಟೇಶ ಅವನ ಅನಾರೋಗ್ಯದಿಂದ ಸ್ವಾಭಾವಿಕ ಮರಣ ಹೊಂದಿದ್ದಾನೆ ಎಂದರೆ ಸರಿಯಲ್ಲ.

1 ನೇ ಆರೋಪಿ ಊರಿನಲ್ಲಿ ಅಡಿಕೆ ವ್ಯಾಪಾರ ಮಾಡುತ್ತಾನೆ ಎಂದರೆ ಸರಿ. ವೆಂಕಟೇಶ 1 ನೇ ಆರೋಪಿಯ ಹತ್ತಿರ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಸರಿಯಲ್ಲ. ವೆಂಕಟೇಶ 1 ನೇ ಆರೋಪಿಯ ಹತ್ತಿರ ಹಣಕಾಸಿನ ವ್ಯವಹಾರ ಇದ್ದು, ಅವರ ನಡುವೆ ವೈಷಮ್ಯ ಇತ್ತು ಎಂದರೆ ಸರಿಯಲ್ಲ. ಚಾಸಾ-6 ಅಜ್ಜಯ್ಯ ಇವರು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ನಿಂತಿದ್ದರು ಎಂದರೆ ಸರಿ. ನಾವು ಚಾಸಾ-6 ಇವರಿಗೆ ಬೆಂಬಲಿಸುತ್ತಿದ್ದು, ಆರೋಪಿತರು ಬೇರೆ ವ್ಯಕ್ತಿಗೆ ಬೆಂಬಲಿಸುತ್ತಿದ್ದು ಈ ವಿಷಯವಾಗಿ ನಮಗೆ ವೈಷಮ್ಯ ಇತ್ತು ಎಂದರೆ ಸರಿಯಲ್ಲ. ವೆಂಕಟೇಶ ಅನಾರೋಗ್ಯದಿಂದ ತೀರಿಕೊಂಡಿದ್ದು, ಅದನ್ನು ಉಪಯೋಗಿಸಿಕೊಂಡು ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ವೆಂಕಟೇಶ

ತೀರಿಕೊಂಡಾಗ ಚಾಸಾ–22 ನಮ್ಮ ಊರಿಗೆ ಬಂದಿರಲಿಲ್ಲ. ವೆಂಕಟೇಶನ ಮಕ್ಕಳು ಸಹ ಬಂದಿರಲಿಲ್ಲ. ವೆಂಕಟೇಶನ ವಾರಸ್ದಾರರು ನಾವೇ ಎಂದು ಡಿ ಸಿ ಕಚೇರಿಯಲ್ಲಿ ಅರ್ಜಿ ಕೊಟ್ಟಿದ್ದೆವು ಎಂದರೆ ಸರಿ. ಆದರೆ ಪರಿಹಾರ ಕೊಟ್ಟಿರುವುದಿಲ್ಲ. ನಾವು ವೆಂಕಟೇಶನ ವಾರಸುದಾರರು ಆಗಿರುವುದಿಲ್ಲ ಎಂದು ಡಿ ಸಿ ಕಚೇರಿಗೆ ಕರೆಯಿಸಿ ನನಗೆ ಎಚ್ಚರಿಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ವೆಂಕಟೇಶನ ಸಾವಿಗೆ ಆರೋಪಿತರು ಕಾರಣರಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ 1 ನೇ ಆರೋಪಿಯ ತಾಯಿ  ಮತ್ತು 3 ನೇ ಆರೋಪಿ 1 ನೇ ಆರೋಪಿಯ ತಮ್ಮ ಎಂದರೆ ಸರಿ. ಆರೋಪಿತರು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.